# ಅಧ್ಯಾಯ 55

ಓಂ ಗಣೇಶಾಯ ನಮಃ    ಸದ್ಗುರು ಸಿದ್ಧಾರೂಢ ನಮಃ



ಛಂದ :- ಸದ್ಗುರುವನತಿ ಪ್ರೇಮಭಾವದಿ ಸೇವಿಸಿದವರು ಧನ್ಯರು ಸದ್ಗುಣಗಳನು
ಬೆಳೆಸಿದರು ತ್ರೈಲೋಕ್ಯದೊಳಗತಿಪೂಜ್ಯರು
ದೇಹಬುದ್ಧಿಯ ಬಿಟ್ಟು ಸೇವಾದೊಳಗೆ ಜನ್ಮವನಿಟ್ಟರು  ಮೋಹ ತೊರೆದೀ  ಭಕ್ತಿ
ಮಾರ್ಗದಿ  ಜ್ಞಾನ ಸಂಪಾದಿಸಿದರೂ..

ಶ್ರೀ ಸದ್ಗುರು ಸಿದ್ಧಾರೂಢನೇ , ನಿನಗೆ ಜಯ ಜಯಕಾರವಿರಲಿ. ನೀನು ಮುಮುಕ್ಷುವಿಗೆ ಸ್ವರೂಪಾವಸ್ಥೆಯನ್ನು ತೋರಿಸಿ, ಎಲ್ಲಾ ಭವವ್ಯಥೆಯನ್ನು ಕಳೆದು ಬಿಡುವಿ, ಇಂಥಾ ನಿನ್ನ ಪಾದಗಳಲ್ಲಿ ಮಸ್ತಕವನ್ನಿಟ್ಟು ನಮನ ಮಾಡುತ್ತೇನೆ. ಅತ್ಯಂತ ಮಧುರವಾಗಿರುವ ನಿನ್ನ ಚರಿತ್ರ ಶ್ರವಣ ಮಾತ್ರದಿಂದ ಸರ್ವ ಮನೋರಥಗಳು ಸಿದ್ಧಿಸುವವು ಮತ್ತು ಈ ಜಗತ್ತಿನೊಳಗೆ ಮಾಯಾ ಮೋಹದಿಂದ ಯಾರು ಮೋಹಿತರಾಗಿರುವರೋ, ಅವರ ಗಾಢವಾದ ಅಜ್ಞಾನವು ಪರಿಹಾರವಾಗುವದು. ಹಿಂದಿನ ಅಧ್ಯಾಯದಲ್ಲಿ ನಿರೂಪಿಸಿತ್ತು - ಪರಮೇಶ್ವರನು ಅವತಾರ ಧಾರಣೆ ಮಾಡಿ ಸಿದ್ಧಾರೂಢ ಎಂಬ ನಾಮದಿಂದ ಭೂಮಿಯ ಮೇಲೆ ಬಂದಿರುವನು. ಆತನ ಅವತಾರ ಕಾರ್ಯಕ್ಕೆ ಸಹಾಯವಾಗುವ ದಶೆಯಿಂದ ದೇವತೆಗಳಿಗೆ ಆಜ್ಞೆ ಕೊಟ್ಟ ಪ್ರಕಾರ ಅವರಾದರೂ ಆತನ ಕೂಡ ನರವೇಷವನ್ನು ಧಾರಣ ಮಾಡಿ ಭೂಮಿಗೆ ಬಂದಿರುವರು. ಅವರ ಅನೇಕ ಚರಿತ್ರಗಳಿರುವವು.ಅವುಗಳನ್ನು ಇದರಲ್ಲಿ ಬರೆದು ಗ್ರಂಥ ಸಮಾಪ್ತಿ ಮಾಡಬೇಕಾಗಿರುವದರಿಂದ ಈ ಅಧ್ಯಾಯದಲ್ಲಿ

ಗ್ರಂಥ ವಿಸ್ತಾರ ಭಯದಿಂದ ಅತ್ಯಲ್ಪವಾಗಿ ನಿರೂಪಿಸುವೆನು. ಅವರ ಹೆಸರುಗಳನ್ನು ಮುಖದಿಂದ ಉಚ್ಚರಿಸುವದರಿಂದ ತತ್ಕಾಲ ಮನಸ್ಸಿಗೆ ಶಾಂತಿ ಪ್ರಾಪ್ತಿಯಾಗುವದು. ಶ್ರೀ ಸಿದ್ಧಾರೂಢರ ಸೇವೆಗೋಸ್ಕರ ಇವರು ಜನ್ಮವೆಲ್ಲಾ ಯೋಜಿಸುವರು. ಅನಂತ ಜನ್ಮಗಳಲ್ಲಿ ತಪಸ್ಸು ಮಾಡಿದ್ದು, ಅದೆಲ್ಲಾ ಈ ಜನ್ಮಕ್ಕೆ ಫಲಿತವಾಗಿ, ಸದ್ಗುರುಚರಣಗಳ ಲಾಭವನ್ನು ಹೊಂದಿ ಸೇವಾ ಪ್ರೇಮವು ಉತ್ಪನ್ನವಾಯಿತು. ಇವರು ಸೇವೆಯ ಆನಂದವನ್ನೇ ಭೋಗಿಸುತ್ತಿದ್ದು, ಸದ್ಗುರುಗಳಿಗೆ ಎರಡನೇದೇನೂ ಬೇಡದೆ ಮಾಡುತ್ತಿರುವ ಆ ಸೇವಾ ಸ್ಥಿತಿಯನ್ನು ವರ್ಣಿಸಲಿಕ್ಕೆ ಸಹಸ್ರ ಮುಖನಿಗೂ ಸಾಧ್ಯವಾಗುವುದಿಲ್ಲ. ಮಂದಮತಿಯಾದ ನಾನು ಎಷ್ಟಂತ ವರ್ಣಿಸಲಿ. ಅ ಸದ್ಭಕ್ತರ ಭಕ್ತಿಯು ಅದ್ಭುತವಾದದ್ದು, ಯಾಕೆಂದರೆ ವೇದ ವೇದಾಂತಗಳಿಗೆ ಸಿಗದಂಥಾ ಆ ಸದ್ಗುರುನಾಥನನ್ನು ಇವರು ತಮ್ಮ ಸದ್ಭಾವದಿಂದ ಬಂಧಿಸಿರುವರು. ಯಾವಾತನ ಸ್ವರೂಪವನ್ನು ವರ್ಣಿಸಲಿಕ್ಕೆ ಹೋಗಿ ಶ್ರುತಿ ಸಿದ್ಧಾಂತವು ಮೌನವಾಯಿತು. ಮತ್ತು ನೇತಿ

ನೇತಿ ಎಂದು ಅಂದು ಶ್ರುತಿಗಳು ತಟಸ್ಥಾವಸ್ಥೆಯನ್ನು ಹೊಂದಿದವು, ಸ್ವರೂಪದಿಂದ ಅಂಥಾತನಾದ ಆ ಕೈಲಾಸನಾಥನು ಅಜ್ಞ ಜನರ ಉದ್ಧಾರಾರ್ಥವಾಗಿ, ಸಗುಣ ರೂಪದಿಂದ ಸಿದ್ಧ ಸಮರ್ಥನಾಗಿ ಇಲ್ಲಿ ಅವತರಿಸಿರುವನು. ಆ ಸದ್ಗುರುನಾಥ  ಅನಂತ ಚರಿತ್ರಗಳನ್ನು ಅತ್ಯಾದರದಿಂದ ವರ್ಣಿಸಲಿಕ್ಕೆ  ನನ್ನ ಅಲ್ಪ ಮತಿಯು  ಸಾಲದಂತ ಇಲ್ಲಿಗೆ  ಸಾಕು ಮಾಡಿರುತ್ತೇನೆ. ಸದ್ಗುರು ಭಕ್ತರ ಕೆಲವು ನಾಮಗಳನ್ನು  ಇಲ್ಲಿ ಕಥಿಸಿ, ಸದ್ಗುರುಗಳನ್ನು  ಸಂತೋಷಪಡಿಸಬೇಂದು, ನಾನು ಸದ್ಭಾವದಿಂದ ನಿರೂಪಿಸುವೆನು. ಪ್ರಥಮದಲ್ಲಿ ಕೀರ್ತನೆಯ ಧ್ವಜವನ್ನೇರಿಸಿದ ಅನಂತ ಮಹಾರಾಜರು ಸದ್ಗುರುನಾಥ ಸಮ್ಮುಖದಲ್ಲಿ ನಿಂತು ಕೀರ್ತನ ಮಾಡುವಾಗ,ಶ್ರೋತಾ ಜನರಲ್ಲರೂ ಪ್ರೇಮ ಕಲ್ಲೋಲದಲ್ಲಿ ಮುಳುಗಿ ದೇಹ ಭಾನವನ್ನು ಮರೆಯುತ್ತಿದ್ದರು. ಈತನು ಬಹುಕಾಲ ಸದ್ಗುರುಗಳ ಸಂಗಡ ನಿಕಟವಾಸ ಮಾಡುತ್ತಿದ್ದು, ಅವರ ಸೇವೆ ಮಾಡುತ್ತಾ, ಗುರುಪಾದದಲ್ಲೇ ಕೈಲಾಸವನ್ನು  ಹೊಂದಿದನು. ರಾಮದಾಸನ ಕೀರ್ತನವಾದರೂ ಅದ್ಭುತ ಪ್ರೇಮದಾಯಕವಾಗಿದ್ದು,

ಶ್ರೋತಾ ವಕ್ತರಿಗೆ ನೇತ್ರಗಳಿಂದ ಅಶ್ರುಪಾತ ಮಾಡಿಸುವದಾಗಿತ್ತು. ಇವನ ಕೀರ್ತನದಲ್ಲಿ ಆನಂದವು ಉಕ್ಕೇರಿ ಸದ್ಗುರುನಾಥನಾದರೂ ತಲ್ಲೀನ ಚಿತ್ತರಾಗುತ್ತಿದ್ದರು. ಮಿಶ್ರಿಕೋಟೆ ಶಂಕರ ಶಾಸ್ತ್ರಿಯು ಪ್ರತಿವರ್ಷ ಕಾರ್ತಿಕ ಪೂರ್ಣಿಮೆಗೆ ಸಮಾಪ್ತವಾಗುವಂತೆ ಏಳು ದಿನ ಭಾಗವತ ಪುರಾಣವನ್ನು ಪ್ರತಿಪಾದನ ಮಾಡುತ್ತಾನೆ. ಕೃಷ್ಣಶಾಸ್ತ್ರಿಯ ಭಾಗವತ ಪ್ರತಿಪಾದನವಾದರೂ ಅತ್ಯಂತ ಪ್ರೇಮಯುಕ್ತವಾಗಿದ್ದು, ಶ್ರವಣ ಮಾತ್ರದಿಂದ ಸರ್ವರೂ ತಲ್ಲೀನರಾಗಿ ದೇಹ ವಿಸ್ಮೃತಿಯನ್ನು ಹೊಂದುತ್ತಿದ್ದರು. ಸದ್ಗುರುನಾಥರು ಇವರ ಸೇವೆ ತೆಗೆದುಕೊಳ್ಳುವಾಗ ಬಹಳ ಆನಂದ ಪಡುತ್ತಿದ್ದರು. ಎಂದು ಅವರ ನಾಮಗಳನ್ನು ಇಲ್ಲಿ ನಿರೂಪಿಸಲಿಕ್ಕೆ ಸದ್ಗುರುಗಳು ಪ್ರೇರಿಸಿದರು. ಬಾಬಾಕೃಷ್ಣ ಗರ್ದೆ ಇವನು ಶ್ರೀ ಸಿದ್ಧಾರೂಢರ ಮೇಲೆ ಅತ್ಯಂತ ಪ್ರೇಮ ಉಳ್ಳವನಾಗಿದ್ದು, ಅದ್ಭುತವಾದ ಸಿದ್ಧ ಕೀರ್ತಿಯನ್ನು ವರ್ಣಿಸಿ ಅನೇಕ ಕವಿತೆಗಳನ್ನು ಮಾಡಿರುವನು. ಇದಲ್ಲದೆ ಸದ್ಗುರುಗಳ ಮುಂದೆ ವೇದಾಂತ ಗ್ರಂಥಗಳನ್ನು ಬಹು ವಿಶದವಾಗಿ

ಪ್ರತಿಪಾದಿಸುವಾಗ, ಸ್ತ್ರೀ ಪುರುಷ ಬಾಲಕರಿಗೆ ಸಹಾ ಚಿತ್ತದ ಮೇಲೆ ಉತ್ತಮ ಪರಿಣಾಮವಾಗುತ್ತಿತ್ತು. ಬಾಳಾ ದೀಕ್ಷಿತನು ಘನ ಪಂಡಿತನಿರುತ್ತಿದ್ದು, ಶ್ರೀ ಸಿದ್ದರ ಮುಂದೇ ಬ್ರಹ್ಮ ಶಂಕರಭಾಷ್ಯವನ್ನು ಬಹು ಸುಲಭವಾಗಿ ತಿಳಿಯುವಂತೆ ಅರ್ಥ ತೆಗೆದು ಹೇಳುತ್ತಿದ್ದರು. ಶ್ರೀಪಾದಶಾಸ್ತ್ರಿ ಉಪಾಧ್ಯನಾದರೂ ಭಾಷ್ಯ ನಿರೂಪಿಸುವಾಗ ಅತ್ಯಂತ ವಿಷದವಾಗಿ ಹೇಳಿ, ಎಲ್ಲರಿಗೂ ಹೃದ್ಗತವಾಗಿ ಆನಂದ ಉಂಟಾಗುವಂತೆ ಮಾಡುತ್ತಿದ್ದನು. ವಿರೂಪಾಕ್ಷ ಶಾಸ್ತ್ರಿಯು ಸದ್ಗುರುಗಳ ಸಮ್ಮುಖದಲ್ಲಿ ನಿತ್ಯ ಪುರಾಣ ಹೇಳುವನು. ಮಹಾಭಾರತವನ್ನು ಬಹು ಸುರಸವಾಗುವಂತೆ ಹೇಳಿ ಶ್ರೋತಾ ಜನರ ಮನಸ್ಸಿಗೆ ಸಮಾಧಾನ ಉಂಟು ಮಾಡುತ್ತಿರುವನು. ಮತ್ತು ಪ್ರತಿ ಒಂದು ಉತ್ಸವದ ದಿವಸ ಅತ್ಯಾದರದಿಂದ ಕೀರ್ತನ ಮಾಡುವನು. ಸದ್ಗುರುಗಳಾದರೂ ಸಂತುಷ್ಟರಾಗಿ ಆತನನ್ನು ಬಹು ಪ್ರೇಮದಿಂದ ನಡಿಸುವರು.

ಗೋವಿಂದ ಸಂತ ಹಳಿಯಾಳಕರನು ಮಹಾ ವೈರಾಗ್ಯಶಾಲಿಯಾಗಿ, ತನ್ನ ಸ್ತ್ರೀ ಸಮೇತವಾಗಿ ಬಂದು ಸದ್ಗುರುವರನ ಸೇವೆಯನ್ನು ಮಾಡುತ್ತಿದ್ದನು. ಆತನು ಸದ್ಗುರುಗಳ ಮುಂದೆ ನಿತ್ಯ ಕೀರ್ತನ ಮಾಡಿ, ಉದರ ನಿರ್ವಾಹಾರ್ಥ ಭಿಕ್ಷೆ ಮಾಡುತ್ತಿದ್ದನು. ಆಗ ಬೆಂಗಳೂರಿನಿಂದ ಭಕ್ತ ಜನರು ಬಂದು ಸದ್ಗುರುಗಳನ್ನು ಕುರಿತು ಪ್ರಾರ್ಥಿಸುತ್ತಾರೆ - 'ಹೇ ಪ್ರಭೋ, ನಮ್ಮ ಊರಲ್ಲಿ ಅನುದಿನ ಕೀರ್ತನೆ ಮಾಡುವ ಸಲುವಾಗಿ, ತಮ್ಮಲ್ಲಿಂದ ಒಬ್ಬ ಸಜ್ಜನನನ್ನು ನಮ್ಮಲ್ಲಿಗೆ ಕಳುಹಿಸಬೇಕು. ಆತನ ಮುಖದಿಂದ ನಾವು ಕೀರ್ತನೆ ಕೇಳಿ ಉದ್ಧಾರರಾಗುವೆವು. ನಿಮ್ಮ ಅದ್ಭುತವಾದ ಕೀರ್ತಿಯನ್ನು ವರ್ಣಿಸುವ ಉದ್ದಿಶ್ಯ ಇತರ ಊರುಗಳಿಗೆ ಸಂತರನ್ನು ನೀವು ಕಳುಹಿಸಿದಿರಿ. ಈಗ ನಮ್ಮ ಕಡೆಗೆ ಹಳಿಯಾಳ ಸಂತರನ್ನು ಕಳುಹಿಸಿಕೊಟ್ಟು ನಮ್ಮ ಮೇಲೆ ಕೃಪಾವಂತರಾಗಿರಿ." ಈ ಪ್ರಕಾರ ಆ ಭಕ್ತ ಜನರ ವಚನವನ್ನು ಕೇಳಿ, ಗೋವಿಂದ ಸಂತನನ್ನು ಕುರಿತು, ಸದ್ಗುರುಗಳನ್ನುತ್ತಾರೆ - "ಸಂತನೇ, ನೀನು ಬೆಂಗಳೂರಿಗೆ ಹೋಗಿ, ಅಲ್ಲಿ ನಿತ್ಯ ಕೀರ್ತನೆ

ಮಾಡುವಂಥವನಾಗು, ಜನರಿಗೋಸ್ಕರ ಸದ್ಗುರು ಕೀರ್ತಿಯನ್ನೂ, ಹಗಲು ರಾತ್ರಿ ನಾಮಸ್ಮರಣವನ್ನೂ ಬೋಧಿಸುತ್ತಿರು. ಇದರಿಂದ ಅವರು ಉತ್ತಮ ಭಕ್ತಿಯುಕ್ತರಾಗಿ ಸಹಜವಾಗಿ ಉದ್ಧಾರವಾಗುತ್ತಾರೆ. ಹಾಗೆಯೇ ಆತನು ಬೆಂಗಳೂರಿಗೆ ಹೋಗಿ, ಅಲ್ಲಿ ಕೀರ್ತನೆ ಮಾಡುತ್ತಿರುವಾಗ ಸರ್ವ ಶ್ರೋತಾ ಜನರು ಆನಂದಭರಿತರಾಗುವರು. ಅವರೊಳಗೆ ಸದ್ಗುರುಭಕ್ತಿ ವಿಶೇಷ ಬೆಳೆದು, ಸಮಸ್ತರೂ ಸದ್ಗುರು ದರ್ಶನವನ್ನು ಇಚ್ಛಿಸುವರು. ಆಗ ಆ ಭಕ್ತರನ್ನೆಲ್ಲಾ ಕರೆದುಕೊಂಡು, ಗೋವಿಂದಸಂತನು ಸಿದ್ಧಾರೂಢರ ಬಳಿಗೆ ಬಂದು, ಸಿದ್ಧ ದರ್ಶನದಿಂದ ಸರ್ವರಿಗೂ ಆನಂದಗೊಳಿಸಿ ಅವರನ್ನು ಸ್ವಸ್ಥಾನಕ್ಕೆ ಕರೆದುಕೊಂಡು ಹೋಗುವನು. ಬ್ರಹ್ಮೀಭೂತರಾದ ಷಣ್ಮುಖಸ್ವಾಮಿಯವರು ಪೂರ್ವದಲ್ಲಿ ಬಹುಕಾಲ ಸದ್ಗುರುಗಳ ಬಳಿಯಲ್ಲಿರುತ್ತಿದ್ದರು. ಸದ್ಗುರು ಮುಖದಿಂದ ನಿತ್ಯವೇದಾಂತ ಶ್ರವಣ ಮಾಡುತ್ತ, ಇವರು ಜ್ಞಾನವಂತರಾದರು. ಬಹುಕಾಲ ಇಲ್ಲಿ ಇದ್ದು ಆಮೇಲೆ ವಿಜಾಪುರಕ್ಕೆ ಹೋಗಿ, ಅಲ್ಲಿ ಒಂದು ಸ್ಥಾನದಲ್ಲಿ ಆಸನ ಹಾಕಿ

ಹದಿನಾಲ್ಕು ವರ್ಷ ತನಕ ಕುಳಿತಲ್ಲೇ ಕುಳಿತಿರುತ್ತಿದ್ದರು. ಅಲ್ಲೇ ಅನ್ನಪಾನಾದಿಗಳನ್ನು ಸೇವಿಸುತ್ತಿದ್ದು, ಅಖಂಡ ಆತ್ಮಧ್ಯಾನ ಮಾಡುತ್ತ, ಜನರು ಕೂಡ ಮೌನ ಧಾರಣಮಾಡಿ, ಕಠಿಣವಾದ ಯೋಗಸಾಧನೆಯನ್ನು ಮಾಡಿದರು. ಆಮೇಲೆ ಹೊರಗೆ ಬಂದು ಮುಮುಕ್ಷು ಜನರಿಗೆ ವೇದಾಂತವನ್ನು ವಿವರಿಸಿ ಅಂತರದೊಳಗೆ ಜ್ಞಾನ ಪ್ರಕಟವಾಗುವಂತೆ ಅನುಗ್ರಹಿಸುತ್ತಿದ್ದರು. ವಿಜಾಪುರದಲ್ಲಿಯ ಅವರ ಮಠದಲ್ಲಿ ಈಗಲೂ ಪ್ರತಿವರ್ಷ ಶ್ರಾವಣ ಮಾಸದಲ್ಲಿ ಮಹಾ ವೈಭವದಿಂದ ಉತ್ಸವ ನಡೆಯುವದು. ರಾಮಾಚಾರ್ಯ ಕಡಲಾಸ್ಕರ ಎಂಬುವನು ಸಿದ್ಧ ಪೂಜೆಯ ಮಂತ್ರಗಳನ್ನು ಅನೇಕ ಸದ್ಗುರು ಸ್ತೋತ್ರಗಳನ್ನು ರಚಿಸಿ, ಸಿದ್ದರಾಯರನ್ನು ಸೇವಿಸಿದನು. ಪ್ರತಿವರ್ಷ ಸಿದ್ಧಾರೂಢ ಸ್ವಾಮಿಯವರ ಬಳಿಗೆ ಸದಾಶಿವಪ್ಪ ಇಟಗಿ ಎಂಬಾತನು ತನ್ನ ಭಜನೆ ಮಂಡಳಿ ಸಮೇತ ಉತ್ಸವಗಳಿಗೋಸ್ಕರ ಬರುತ್ತಿದ್ದನು. ಸಿದ್ಧ ಸದ್ಗುರು ಪಾದದಲ್ಲಿ ಅನನ್ಯ ಭಕ್ತಿಯುಳ್ಳ ಅಣ್ಣಿಗೇರಿಯ ತೋಟಪ್ಪ ದೇಸಾಯಿ ಎಂಬಾತನು ಪ್ರತಿವರ್ಷ ತನ್ನ ಊರಲ್ಲಿ ಸದ್ಗುರು

ಉತ್ಸವವನ್ನು ಮಾಡುತ್ತಾನೆ. ಬಹು ಕಾಲದಿಂದ ಸದ್ಗುರು ಸೇವಾ ಮಾಡುತ್ತಿದ್ದ ಕಾಶಿನಾಥಪಂತ ಛತ್ರೆ ಎಂಬಾತನು ಅನೇಕ ಮಂದಿಯನ್ನು ಕರೆದುಕೊಂಡು ಇಲ್ಲಿ ಜಾತ್ರೆಗೆ ಬಂಧು, ಸರ್ವರಿಗೂ ಸದ್ಗುರುದರ್ಶನ ಮಾಡಿಸುತ್ತಿದ್ದನು.

ವಿರಕ್ತನಾಗಿರುವ ಸಿದ್ರಾಮಯ್ಯ ಸ್ವಾಮಿ ಎಂಬಾತನು ಶ್ರೀ ಸಿದ್ಧರ ಮುಖದಿಂದ ವೇದಾಂತ ಶ್ರವಣ ಮಾಡಿ ದೇಶ ದೇಶಗಳಲ್ಲಿ ಹೋಗಿ ಭಕ್ತಿ ಜನರಿಗೆ ಬೋಧಿಸಿ ಅವರ ಅಜ್ಞಾನವನ್ನು ಕಳೆಯುವನು. ಶಿವರಾತ್ರಿ ಮತ್ತು ಶ್ರಾವಣ ಜಾತ್ರೆ ಕಾಲದಲ್ಲಿ ಹಾಗೂ ಪ್ರತಿ ಸೋಮವಾರದ ಪೂಜೆ ಮಾಡುವಾಗ ಪೂಜಾ ಕಾರ್ಯಕ್ಕೆ ಸಹಾಯ ಮಾಡುವ ಜನರ ಹೆಸರುಗಳು ಹೇಗಿರುತ್ತವೆ. ತುಕ್ಕಪ್ಪ ಸಫಾರೆ ಎಂಬುವನು ಪ್ರಮುಖರು. ಇತರರು ತುಳಜಪ್ಪಾ, ಮಲ್ಲಾರ, ಗೋವಿಂದ, ತುಕಾರಾಮ, ಎಂಬ ಇವರೆಲ್ಲಾ ಅತ್ಯಂತ ಪ್ರೇಮದಿಂದ ಸೇವಾ ಮಾಡುತ್ತಾರೆ. ಸಿದ್ಧಪ್ಪಾ ಉಜ್ಜಣ್ಣನವರ ಎಂಬಾತನೇ ಮುಖ್ಯ ಪೂಜಾರಿಯು. ಈತನ ಮನೆಗೆ ಸದ್ಗುರುಗಳು ನಿತ್ಯ ಹೋಗಿ ರಾತ್ರಿ ಕಾಲದಲ್ಲಿ

ಅಲ್ಲೇ ಇರುತ್ತಿದ್ದು ಭಜನೆ ಶಾಸ್ತ್ರ ವಗೈರೆ ಅಲ್ಲೇ ನಡಿಸುವರು. ಮೇಲೆ ಹೇಳಿದವರೆಲ್ಲರೂ ಉತ್ಸವ ಕಾಲಗಳಲ್ಲಿ ತಮ್ಮ ಕೆಲಸಗಳನ್ನು ಬಿಟ್ಟು, ರಾತ್ರಿ ಹಗಲು ಸದ್ಗುರು ಮಠದಲ್ಲೇ ಇದ್ದು ಅತಿ ಕಠಿಣವಾದ ಸೇವೆ ಮಾಡುತ್ತಿರುವರು. ಇನ್ನು ಬ್ರಹ್ಮಭೂತರಾದ ಸೇವಕರು ಯಾರ್ಯರೆಂದರೆ- ಶಿವಯ್ಯಾ, ಸಂಗಪ್ಪಾ, ಗೋರಕನಾಥ, ಸಿದ್ದಯ್ಯಾ, ಗಂಗಪ್ಪ, ಗಣಪ್ಪ; ಇವರೆಲ್ಲರೂ ಸದ್ಗುರುಗಳ ನಿಕಟವಾಸದಲ್ಲಿದ್ದು ಬಹು ಸೇವಾ ಮಾಡುತ್ತಿದ್ದರು. ಮಹಾ ಸದ್ಭಕ್ತನಾದ ವಿರೂಪಾಕ್ಷ ಕಾತರಕಿ ಎಂಬಾತನೇ ಸೋಮವಾರ ಪೂಜೆಯ ಉತ್ಪಾದಕನಿರುವನು. ಇವನು ಬಹಳ ಮಂದಿಯನ್ನು ಕೂಡಿಸಿ ನಿತ್ಯ ಪ್ರಾತಃಕಾಲದಲ್ಲಿ ಸದ್ಗುರು ಸ್ಥಾನಕ್ಕೆ ಬಂಧು ಕಠಿಣವಾದ ಸೇವಾ ಕೆಲಸಗಳನ್ನು ಮಾಡುವನು. ಸುಮತಿಯಾದ ನಿರುಪಾದಪ್ಪಾ ದೊಡವಾಡ ಎಂಬವನು ಸದ್ಗುರುಗಳ ಮೇಲೆ ದೃಢವಾದ ಭಕ್ತಿಯುಳ್ಳವನಾಗಿ, ತನ್ನ ಮನೆಕೆಲಸಗಳನ್ನು ಬಿಟ್ಟು, ಮಠದ ಕೆಲಸಗಳನ್ನೆಲ್ಲಾ ಬಹು ಜಾಗ್ರತೆಯಿಂದ ಮಾಡಿಸುವನು, ನಿತ್ಯ ಮಠದಲ್ಲಿದ್ದು ಸೇವಾ ಮಾಡುತ್ತಿರುವವರು ರಮಾನಂದ, ಮಂಗೇಶ, ಗೋವಿಂದ

ಮುಂತಾದವರು ಬಹು ಸೇವೆ ಮಾಡುವರು. ಪಾಕಶಾಲೆಯಲ್ಲಿ ಕಠಿಣ ಸೇವಾ ಮಾಡುವವವರು ಯಾರ್ಯಾರೆಂದರೆ - ಮುಖ್ಯವಾಗಿ ಶಿವಬಸಪ್ಪ, ರಾಚಪ್ಪ ಇವರು ತಮ್ಮ ಮನೆಯನ್ನು ಬಿಟ್ಟು ಇಲ್ಲೇ ಇದ್ದು, ಅತ್ಯಾದರದಿಂದ ಸೇವಾ ಮಾಡುತ್ತಿರುವರು. ಶಿವಭಕ್ತನಾದ ಚನ್ನಬಸಪ್ಪ ಶೆಟ್ರ ಎಂಬಾತನ ಸದ್ಗುರುಗಳನ್ನು ಮಹಾ ವೈಭವದಿಂದ ತನ್ನ ಗ್ರಾಮವಾದ ಮಂಟೂರಿಗೆ ಕರೆದುಕೊಂಡು ಹೋಗಿ ಪೂಜಿಸಿದ್ದನು. ಆ ಸಮಯದಲ್ಲಿ ಹುಬ್ಬಳ್ಳಿಯ ಭಕ್ತರು ಸದ್ಗುರು ತೀರ್ಥದ ವಿನಹಾ ಅನ್ನ ಸೇವಿಸಲಿಕ್ಕಿಲ್ಲವೆಂತ ಮೂರು ದಿವಸಗಳ ತನಕ ಉಪವಾಸ ಕುಳಿತಿದ್ದರು. ಆಗ ಸದ್ಗುರುಗಳು ಹುಬ್ಬಳ್ಳಿ ಭಕ್ತರ ಒಪ್ಪಿಗೆ ಇಲ್ಲದೆ ಇತರ ಗ್ರಾಮಗಳಿಗೆ ಹೋಗುವದಿಲ್ಲ, ಎಂದು ನೇಮ ಮಾಡಿದರು. ವಸಂತರಾವ ದಾಭೋಳೇಕರ ಎಂಬಾತನು, ಸಿದ್ಧಾರೂಢರ ವಿಜಯವೆಂಬ ಸದ್ಗುರು ಚರಿತ್ರವನ್ನು ಛಾಪಿಸಿ ಪಾದಕ್ಕೆ ಅರ್ಪಿಸಿದನು, ಹಾಗೂ ಪರಶುರಾಮ ಸಬನಿಸ ಎಂಬಾತನು ಮಾಡಿದ ಮರಾಠಿ ಪದ್ಯ ಚರಿತ್ರವನ್ನೂ ವಸಂತರಾಯನು ಛಾಪಿಸಿ, ಸದ್ಗುರುಗಳಿಗೆ

ಅರ್ಪಿಸಿದನು . ಈ ಪ್ರಕಾರ ನಿಷ್ಕಾಮ ಸೇವೆಗೋಸ್ಕರ

ಧನವನ್ನು ಯೋಜಿಸುವನು. ಈ ದಾಭೋಳಕರ ಬಂಧುಗಳು

ತಮ್ಮ ನಿಸ್ಸಿಮ ಭಕ್ತಿಯಿಂದ ಸದ್ಗುರುವರನ್ನು ಸಂತೋಷ

ಪಡಿಸುತ್ತಾರೆ. ಗೋಕುಳಾಬಾಯಿ ಗೋವೆಕರ ಎಂಬವಳು,

ಪ್ರಬಂಧರೂಪವಾಗಿ ಅತಿ ಮನೋಹರವಾಗಿರುವ ಶ್ರೀ

ಸಿದ್ಧಾರೂಢರ ಪೂರ್ವ ಚರಿತ್ರೆವನ್ನು ಮಹಾರಾಷ್ಟ್ರ ಭಾಷೆಯಲ್ಲಿ

ರಚಿಸಿರುವಳು. ಗೋವೆಯಲ್ಲಿ ಈಕೆಯು ಸಿದ್ಧ ಮೂರ್ತಿಯನ್ನು

ಸ್ಥಾಪಿಸಿ, ಅನೇಕ ಸಾಧು ಸತ್ಪುರುಷರನ್ನು ಕರಿಸಿ, ಪ್ರತಿ ವರ್ಷ

ಏಳು ದಿನಗಳ ತನಕ ಭಾಮಿನೀ ರೂಪದಿಂದ ಭಕ್ತಿಜ್ಞಾನ

ವೈರಾಗ್ಯ ರಸಭರಿತವಾಗಿಯೂ ಬಹು ಮನೋಹರವಾಗಿಯೂ

ರಚಿಸಿದ್ದಾನೆ. ಕೊಲ್ಲಾಪುರವಾಸಿಯಾದ ಲಕ್ಷ್ಮಣಪ್ಪಾ ಖಿಮಿತಕರ

ಎಂಬಾತನು ತನ್ನ ಪುತ್ರನಿಗೆ ಮಹಾ ವಿಷಮಜ್ವರ

ಪ್ರಾಪ್ತವಾದಾಗ ಸದ್ಗುರುಗಳ ಪ್ರಾರ್ಥನೆ ಮಾಡಿದನು. ಆಗ ಶ್ರೀ

ಸಿದ್ಧನಾಥರು ಕಳುಹಿಸಿದ ವಿಭೂತಿಯನ್ನು ರೋಗಿಯ

ಮುಖದಲ್ಲಿ ಹಾಕಿ ನಾಮಸ್ಮರಣೆ ಮಾಡಿದ ಕೂಡಲೇ ಆತನು

ವ್ಯಾಧಿಮುಕ್ತನಾದನು. ಲಕ್ಷ್ಮಣಪ್ಪನಾದರೂ ಪ್ರತಿವರ್ಷ ಜಾತ್ರೆಗೆ

ಬಂದು ಸದ್ಗುರುಗಳಿಗೆ ಭೆಟ್ಟಿಯಾಗಿ, ಅನ್ನ ಛತ್ರದಲ್ಲಿ ವಿಶೇಷ ಸೇವೆಯನ್ನು ಮಾಡುತ್ತಿರುವನು, ಸಿದ್ಧ ಭಕ್ತರಾದ ಸಂಕಪ್ಪಾ ಮತ್ತು ಹುಚ್ಚಪ್ಪಾ ಇವರು ಸದ್ಗುರುಗಳನ್ನು ತಮ್ಮ ಸ್ವಗ್ರಾಮವಾದ ಗೋಪನಕೊಪ್ಪಕ್ಕೆ ಕರೆದುಕೊಂಡು ಹೋಗಿ ಬಹು ವೈಭವದಿಂದ ಪೂಜಿಸಿ ಸಂತೋಷಪಡಿಸಿದರು. ಹುಬ್ಬಳ್ಳಿ ಪರಪ್ಪನು ಆಮರಣ ಸದ್ಗುರು ಸೇವಾ ಮಾಡುತ್ತಿದ್ದು, ಸಿದ್ಧ ಚಿಂತನೆ ಮಾಡುತ್ತ ಪ್ರಾಣವನ್ನು ತ್ಯಜಿಸಿದನು. ಆತನು ಮಾಡತಕ್ಕ ಸೇವೆಯನ್ನು ಅವನ ಪುತ್ರರು ಮಾಡುತ್ತಾರೆ. ಖಂಡಪ್ಪಾ ಮತ್ತು ದಿವಟೆ ಇವರ ಮನೆಯಲ್ಲಿ ಸರ್ವರೂ ಅನನ್ಯ ಸದ್ಗುರು ಭಕ್ತರಿದ್ದು, ತನುಮನಧನಗಳನ್ನು ಉತ್ಸವ ಕಾಲಗಳಲ್ಲಿ ಸದ್ಗುರು ಸೇವೆಯಲ್ಲಿ ಯೋಜಿಸುವರು. ಮೌನಿಬುವಾ, ಮೌನವನ್ನು ಧರಿಸಿ, ಬಹು ಪ್ರೇಮದಿಂದ ಸದ್ಗುರು ಸೇವೆಯನ್ನು ಮಾಡುವನು, ಶ್ರೀ ಸಿದ್ಧರಿಗೆ ಜ್ವರ ಬಂದಿರುವಾಗ ಮೂರು ದಿನ ತನಕ ಅನ್ನ ಪಾನಾದಿಗಳನ್ನು ತ್ಯಜಿಸಿ, ನಿದ್ರಾಚಲನಾದಿಗಳಿಲ್ಲದೇ ನೆಟ್ಟಗೆ ನಿಂತುಕೊಂಡು ಭಯಂಕರವಾದ ತಪಸ್ಸು ಮಾಡಿದನು. ಸದ್ಗುರುಗಳ ಜ್ವರ

ಬಿಟ್ಟು ಆಹಾರ ಸೇವಿಸಿದರಂದ ಮೇಲೆ ತಾನು ಭಿಕ್ಷೆಗೆ ಹೋದನು. ಸದ್ಗುರು ಸೇವೆಯನ್ನು ಬಹು ಆದರದಿಂದ ಮಾಡುವ ಇನ್ನೂ ಅನೇಕ ಸೇವಕ ಜನರಿರುವರು. ಗ್ರಂಥವು ಬಹಳ ವಿಸ್ತಾರವಾಗುವದೆಂಬ ಭಯದಿಂದ ಅವರ ಹೆಸರುಗಳನ್ನು ಬಿಟ್ಟಿರುವೆನು. ಇವರೆಲ್ಲರೂ ಸದ್ಗುರು ಕೃಪೆಗೆ ಪಾತ್ರರಾಗಿ ತಮ್ಮ ಉದ್ಧಾರ ಮಾಡಿಕೊಂಡರು. ಅನೇಕ ಜನ್ಮಗಳ ತಪವು ಅಪಾರವಿದ್ದುದರಿಂದ ಇವರಿಗೆಲ್ಲಾ ಸದ್ಗುರು ಪ್ರೇಮವು ಉಂಟಾಯಿತು. ಸಿದ್ಧ ಸದ್ಗುರುವು ಭಕ್ತರ ಅಮೂಲ್ಯವಾದ ರತ್ನವೆಂದು ಆತನ ಸೇವೆಯಿಂದ ತಮ್ಮ ಸರ್ವತಾಪಗಳನ್ನು ಪರಿಹಾರಮಾಡಿಕೊಂಡು, ಅವರು ಆನಂದ ಯುಕ್ತರಾಗಿರುವರು. ಎಂಬಲ್ಲಿಗೆ ಶ್ರೀ ಸಿದ್ಧಾರೂಢ ಕಥಾಮೃತದೊಳ್ ಶ್ರವಣ ಮಾತ್ರದಿಂದ ಸರ್ವ ಪಾಪಗಳನ್ನು ಭಸ್ಮ ಮಾಡುವಂಥ ಅತಿ ಮಧುರವಾದ ಈ ಐವತ್ತೈದನೇ ಅಧ್ಯಾಯವನ್ನು ಶಿವದಾಸನು ಶ್ರೀ ಸದ್ಗುರು ಸಿದ್ಧಾರೂಢರ ಚರಣಾರವಿಂದಗಳಲ್ಲಿ ಅರ್ಪಿಸಿರುವನು.